(SRI P. M. NADGOUDA)

(*e*) Yes. According to the provisions of the Mysore Co-operative Societies Act the said Societies come under the jurisdiction of the Government.

(*f*) Yes.

Notice of Adjournment Motion re : harassment to Kannadigas in Talwadi Firka by Tamil Nadu Government

†ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಅದು ಬಹಳ ಧಾರುಣವಾದ ಕತೆ. ಮದ್ರಾಸ್ ರಾಜ್ಯದಲ್ಲಿ ಇರತಕ್ಕ ತಾಳವಾಡಿ ಪ್ರದೇಶವನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು 1955ರಿಂದ ಅನೇಕ ವಿಧವಾದಂಥ ಬೇಡಿಕೆಗಳನ್ನು ಅಲ್ಲಿಯ ಜನ ಸಲ್ಲಿಸಿದ್ದಾರೆ. ಆದಾಗ್ಯೂ ಅವರಿಗೆ ವಿಮೋಚನೆ ಆಗದೆ ಇರತಕ್ಕ ಧಾರುಣ ಕತೆ ಅದು. ನನ್ನ ಮಿತ್ರರಾದಂಥ ಶ್ರೀಮಾನ್ ಪುಟ್ಟಸ್ವಾಮಿಯವರ ಜೊತೆ ತಾಳವಾಡಿಯ 60 ಹಳ್ಳಿಗಳನ್ನು ಹೋಗಿ ನೋಡಿದ್ದೇವೆ. ಅಲ್ಲಿ ನೂರಕ್ಕೆ ನೂರು ಜನ ಕನ್ನಡಿಗರೇ ಇರತಕ್ಕ ಹಳ್ಳಿಗಳಿವೆ. ಅದನ್ನು ಕರ್ನಾಟಕಕ್ಕೆ ಸೇರಿಸಬೇಕಾದುದು ನಮ್ಮ ಕರ್ತವ್ಯ. ಯಾವುದೇ ದೃಷ್ಟಿಯಿಂದ ನೋಡಿದರೂ ಅದರಿಂದ ಮದ್ರಾಸ್ ರಾಜ್ಯಕ್ಕೆ ಅಥವಾ ಬೇರೆ ರಾಜ್ಯಕ್ಕೆ ಪ್ರಯೋಜನವಾಗಿಲ್ಲ. ಅದು ಸಂಪೂರ್ಣವಾಗಿ ಕರ್ನಾಟಕ ರಾಜ್ಯಕ್ಕೆ ಸೇರಿದರೆ ಅದರಿಂದ ಆ ಜನರಿಗೆ ಅನುಕೂಲ. ಅಲ್ಲಿಯ 50 ಸಾವಿರ ಜನರು ಪಡುತ್ತಿರತಕ್ಕ ಕಷ್ಟದ ದಾರುಣ ಪರಿಸ್ಥಿತಿಯನ್ನು ನೋಡಿದಾಗ ನನಗೆ ವ್ಯಥೆ ಆಯಿತು. ಅಲ್ಲಿಯ ಜನರು ಕಣ್ಣೀರು ಇಡುವ ಪರಿಸ್ಥಿತಿಯನ್ನು ನೋಡಿದೆ. ಅಲ್ಲಿ 50 ಸಾವಿರ ಕನ್ನಡ ಜನ ಮದ್ರಾಸ್ ಜೈಲಿನಲ್ಲಿ ಇರತಕ್ಕ ರೀತಿಯಲ್ಲಿ ಇದ್ದಾರೆ. ಅದನ್ನು ನೋಡಿದಾಗ ನಮ್ಮ ಸರಕಾರದವರು ತಾಳವಾಡಿಯನ್ನು ನಮ್ಮ ರಾಜ್ಯಕ್ಕೆ ಪಡೆಯುವ ಬಗ್ಗೆ ಯಾವುದೇ ರೀತಿಯ ಆಲೋಚನೆ ಮಾಡಲಿಲ್ಲ ಎಂದು ತಿಳಿಯುತ್ತದೆ. ಹಿಂದೆ ತಾಳವಾಡಿಯಲ್ಲಿ ಒಂದು ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಈಗ ರಾಜ್ಯದ ಮಂತ್ರಿಗಳಾಗಿರತಕ್ಕ ಶ್ರೀ ಬಿ. ರಾಚಯ್ಯನವರು ಮಾತನಾಡಿ, ಏನು ಕಷ್ಟವಾದರೂ ಚಿಂತೆಯಿಲ್ಲ, ಆ ಪ್ರದೇಶವನ್ನು ಮೈಸೂರಿಗೆ ಪಡೆದೇ ಪಡೆಯುಬೇಕು ಎಂದು ಒಂದು ನಿಲುವನ್ನು ವ್ಯಕ್ತಪಡಿಸಿದ್ದರು. ಹಾಗೆಯೇ ಶ್ರೀ ಗುರುಪಾದಸ್ವಾಮಿಯವರೂ, ಶ್ರೀ ಎಂ. ಸಿ. ಬಸಪ್ಪನವರೂ ಮತ್ತು ಅನೇಕ ಜನ ತಾಳವಾಡಿಯನ್ನು ಕರ್ನಾಟಕ ರಾಜ್ಯಕ್ಕೆ ಪಡೆಯಬೇಕು ಎಂದು ಹೇಳಿದ್ದಾರೆ. ಯಾವ ರಾಜಕೀಯ ಕಾರಣದಿಂದಲೋ ಅವರು ಸಧ್ಯಕ್ಕೆ ಮಾತನಾಡುತ್ತಾ ಇಲ್ಲ. ಹಿಂದೆ 1965ರಲ್ಲಿ ತಾಳವಾಡಿಯಲ್ಲಿ ಕರ್ನಾಟಕ ಸಮ್ಮೇಳನ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ ಒಂದು ನಿರ್ಣಯವನ್ನು ಮಾಡಿ ತಾಳವಾಡಿ ಸಂಪೂರ್ಣವಾಗಿ ಕರ್ನಾಟಕಕ್ಕೆ ಸೇರಬೇಕು ಎನ್ನುವ ಒಂದು ನಿಲುವನ್ನು ತಾಳಿದರು. ಫಜಲ್ ಅಲಿ ಸಮಿತಿಯ ಮುಂದೆಯೂ ತಾಳವಾಡಿ ಜನ ಒಂದು ಮೆಮೊರೆಂಡಂ ಸಲ್ಲಿಸಿದರು. 1960ನೇ ಇಸವಿಯಲ್ಲಿ ಆಲ್ ಇಂಡಿಯಾ ಕಾಂಗ್ರೆಸ್ ಅಧಿವೇಶನ ಇಲ್ಲಿ ನಡೆದಾಗ ಒಂದು ಮೆಮೊರೆಂಡಂ ಸಲ್ಲಿಸಿದರು. ಅದೇ ಪ್ರಕಾರ ಅವರು ಮನವಿಗಳನ್ನು ಸಲ್ಲಿಸಿಕೊಂಡು ಬರುತ್ತಾ ಇದ್ದಾರೆ. 21-1-1967ರಲ್ಲಿ ಕೂಡ ಒಂದು ಮೆಮೊರೆಂಡಂ ಅನ್ನು ಅಲ್ಲಿಯ ಜನ ಸಲ್ಲಿಸಿದರು. ಇಪ್ಪೊತ್ತು ಅಲ್ಲಿಯ ಪರಿಸ್ಥಿತಿ ಹೇಳಬೇಕಾದರೆ, ತಾಳವಾಡಿ ಕರ್ನಾಟಕಕ್ಕೆ ತೀರ ಹತ್ತಿರ ಪ್ರದೇಶ. ಚಾಮರಾಜನಗರದಿಂದ ಕೇವಲ 12 ಮೈಲಿ ದೂರದಲ್ಲಿದೆ. ಅದರೊಡನೆ ವ್ಯವಹಾರ, ವ್ಯಾಪಾರ ಮತ್ತು ದಿನನಿತ್ಯದ ಜೀವನ ನಡೆಯುವುದು ಸುಲಭ. ಆದರೆ ಗೋಪಿಚೆಟ್ಟಿ ಪಾಳ್ಯ ತಾಳವಾಡಿಗೆ 50 ಮೈಲಿ ದೂರದಲ್ಲಿದೆ. ಅಲ್ಲಿ ಕೋರ್ಟು ವ್ಯವಹಾರ ತಮಿಳಿನಲ್ಲಿ ನಡೆಯುತ್ತದೆ. ಅಲ್ಲಿಗೆ ತಾಳವಾಡಿಯ ಕನ್ನಡ ಜನ ಹೋಗಿ ತಮ್ಮ ಕೋರ್ಟು ವ್ಯವಹಾರ ಮಾಡಬೇಕಾಗಿದೆ. ಅವರ ಈ ಕಷ್ಟವನ್ನು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಯಾವುದಾದರೂ ಒಂದು ರೀತಿಯಲ್ಲಿ ಪರಿಹರಿಸದೇ ಹೋದರೆ ಅಲ್ಲಿಯ ಜನರಿಗೆ ಬಹಳ ಕಷ್ಟವಾಗುತ್ತದೆ. 28ನೇ ತಾರೀಖು ಕನ್ನಡ ಚಳುವಳಿಗಾರರು ತಾಳವಾಡಿ ವಿಮೋಚನೆ ಚಳುವಳಿ ಏರ್ಪಡಿಸಿದ್ದಾರೆ. ಮದರಾಸು ಸರಕಾರವು ಪೋಲೀಸಿನವರು ಅಲ್ಲಿ ಕನ್ನಡಿಗರಿಗೆ ಕೊಟ್ಟ ತೊಂದರೆಯನ್ನು ನೋಡಿದರೆ ವ್ಯಥೆಯಾಗುತ್ತದೆ. ಅಲ್ಲಿ ವಿಲೇಜ್ ಪಂಚಾಯತಿ ಅಧ್ಯಕ್ಷರಿಗೆ ತೊಂದರೆ ಕೊಟ್ಟಿ

ದ್ದಾರೆ. ಚಾಮರಾಜನಗರದಲ್ಲಿ ಮದರಾಸು ಪೋಲೀಸಿನವರೂ ಮತ್ತು ನಮ್ಮ ಪೋಲೀಸಿನವರೂ, ಶ್ರೀ ಪುಟ್ಟಸ್ವಾಮಿಯವರಿಗೂ ಮತ್ತು ಇತರ ಅನೇಕರಿಗೂ, ಚಳುವಳಿಗೆ ಸಂಬಂಧಪಟ್ಟವರೆಂದು ತೊಂದರೆ ಕೊಟ್ಟಿದ್ದಾರೆ. ಹಿಂದೆ ಶ್ರೀ ಎಂ. ಸಿ. ಬಸಪ್ಪನವರು ಈ ವಿಷಯದಲ್ಲಿ ಒಂದು ಹೇಳಿಕೆಯನ್ನು ಕೊಟ್ಟದ್ದು ನನಗೆ ಜ್ಞಾಪಕ ಇದೆ. ಅವರು ಈಗ ಸಿಂಡಿಕೇಟ್ ಕಾಂಗ್ರೆಸ್ಸಿನವರಾಗಿದ್ದಾರೆ.

Mr. SPEAKER.—The expression used by hon. Member is not happy. Hon. Member should avoid it.

ಶ್ರೀ ವಾಟಾಳ್ ನಾಗರಾಜ್.—ಶ್ರೀ ರಾಜಯ್ಯನವರು ಈಗ ತಾನೇ ಸಭೆಗೆ ಬಂದಿದ್ದಾರೆ. ಅವರ ಫೋಟೋ ಕೂಡ ಎರಡು ವರ್ಷಗಳ ಕೆಳಗೆ ಪತ್ರಿಕೆಯಲ್ಲಿ ಬಂದಿತ್ತು. ಅವರು ಅಲ್ಲಿ ಹೋಗಿ ಹೋರಾಟ ಮಾಡಬೇಕು ಎಂದು ಹೇಳಿರುವುದು ಮರೆತಂತೆ ಕಾಣುತ್ತದೆ. ದಯವಿಟ್ಟು ಅವರು ಹಾಗೆ ಮಾಡಬಾರದು. ಮದರಾಸು ಸರಕಾರದಿಂದ ತಾಳವಾಡಿಯನ್ನು ಪಡೆಯಲು ಸರ್ವ ಪ್ರಯತ್ನ ಮಾಡಬೇಕು. ತಾಳವಾಡಿಯನ್ನು ಯಾರಿಗೆ ಕೊಡಬೇಕು ಎಂದು ಬೇಕಾದರೆ ಒಂದು ಕಮೀಷನ್ ಏರ್ಪಡಿಸಿ, ತನಿಖೆ ಮಾಡಲಿ. ಆಗ ಅದು ಸಂಪೂರ್ಣವಾಗಿ ಕರ್ನಾಟಕಕ್ಕೇ ಸೇರಬೇಕು ಎನ್ನುವುದು ದೃಢಪಡುತ್ತದೆ. ಈಪೊತ್ತಿನ ಪರಿಸ್ಥಿತಿಯಲ್ಲಿ ಅಲ್ಲಿಯ ಜನ ಎಲ್ಲಾ ರೀತಿಯ ತೊಂದರೆಗೆ ಒಳಗಾಗಿದ್ದಾರೆ. ಅವರ ಈ ತೊಂದರೆಯನ್ನು ತಪ್ಪಿಸಿ, ಮದರಾಸಿನ ಜೈಲಿನಿಂದ ಅವರನ್ನು ವಿಮುಕ್ತರನ್ನಾಗಿ ಮಾಡಿ ಸಂಪೂರ್ಣವಾಗಿ ಕರ್ನಾಟಕಕ್ಕೆ ಸೇರುವಂತೆ ಮಾಡಬೇಕು. ಅದೇ ರೀತಿ ಬೆಂಗಳೂರಿಗೆ 20 ಮೈಲಿ ದೂರದಲ್ಲಿರುವ ಹೊಸೂರು ಮದರಾಸಿಗೆ ಸೇರಿದೆ. ಅಲ್ಲಿ ನೂರಕ್ಕೆ ನೂರು ಕನ್ನಡ ಮಾತನಾಡತಕ್ಕ ಜನ ಇದ್ದಾರೆ. ಅದರ ಬಗ್ಗೆಯೂ ನಮ್ಮ ಸರಕಾರ ಗಮನ ಕೊಟ್ಟಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ಒಂದು ಸಾರಿ ಬರುವುದಾದರೆ, ನಾನೂ, ಪುಟ್ಟಸ್ವಾಮಿಯವರೂ ಅವರನ್ನು ಅಲ್ಲಿಯ ಪ್ರತಿಹಳ್ಳಿಗೂ ಕರೆದುಕೊಂಡು ಹೋಗುತ್ತೇವೆ. ಅವರು ಅಲ್ಲಿಯ ಕನ್ನಡಿಗರ ಸ್ಥಿತಿಯನ್ನು ಸ್ವತಃ ನೋಡಬಹುದು. ಮಾನ್ಯ ರಾಜಯ್ಯನವರು ಅಲ್ಲಿಗೆ ಹೋಗಿದ್ದರು. 28ನೇ ತಾರೀಖು ನಾವು ಚಳುವಳಿಯನ್ನು ನಡೆಸುತ್ತೇವೆ. ನೀವೂ ಕೂಡ ಬಂದರೆ ನಮಗೆ ಅಭ್ಯಂತರವಿಲ್ಲ. ಚಳುವಳಿ ನಡೆಸಿ ಮುಖ್ಯ ಮಂತ್ರಿಗಳೂ ಬೇಕಾದರೆ ಕಪ್ಪು ಬಾವುಟ ಹಿಡಿಯಲು ನಾವು ಸ್ವಾಗತಿಸುತ್ತೇನೆ. ಇದು ಬಹಳ ಕಠಿಣವಾದ ಪರಿಸ್ಥಿತಿ. ಅಲ್ಲಿ ನೋಡಿದರೆ ಜನ ನಿಜವಾಗಿಯೂ ಮನುಷ್ಯತ್ವದಿಂದ ಬಾಳುತ್ತಾ ಇದ್ದಾರೆಯೇ ಇಲ್ಲವೇ ಅಂತ ಹೇಳಿ ಸಂಕಟ ಬರುತ್ತಾ ಇದೆ. ನೀರು ಇಲ್ಲ, ರಸ್ತೆ ಇಲ್ಲ, ವಸತಿ ಸೌಕರ್ಯ ಇಲ್ಲ, ಆಸ್ಪತ್ರೆ ಇಲ್ಲ, ಮದ್ರಾಸು ಸರ್ಕಾರದವರು ನಾಲ್ಕು ಕಡೆ ಗೋಡೆಗಳನ್ನು ಹಾಕಿ ಹೊರಗೆ ಹೋಗುವುದಕ್ಕೂ ಸಹ ಬಿಡುತ್ತಾ ಇಲ್ಲ, ಅಂತಹ ಪರಿಸ್ಥಿತಿ ಬಂದಿದೆ. ಆ ಪರಿಸ್ಥಿತಿಯಿಂದ ಜನತೆಯನ್ನು ವಿಮುಕ್ತಗೊಳಿಸಲು ಸರ್ವ ಪ್ರಯತ್ನ ಮಾಡಬೇಕು. ಇದರಲ್ಲಿ ಯಾವುದೇ ವಿಧವಾದ ರಾಜಕೀಯ ಇಲ್ಲ, ಚಾಮರಾಜನಗರದಲ್ಲಿ ಈಗ ತಾಳವಾಡಿ ವಿಷಯ ಅಂದರೆ ಅವರಲ್ಲಿ ಏನೋ ರಾಜಕೀಯ ಇದೆ ಅಂತ ಹೇಳಿ ಅನ್ನುತ್ತಾ ಇದ್ದಾರೆ. ಇದರಲ್ಲಿ ಅಂತಹ ರಾಜಕೀಯ ಏನೂ ಇಲ್ಲ, ಬೇಕಾದರೆ ಶ್ರೀಮಾನ್ ಎಂ. ಸಿ. ಬಸಪ್ಪನವರೇ ಈ ಚಳುವಳಿ ನಡೆಸಲಿ, ಅಲ್ಲಿ ಇರತಕ್ಕವರು ಸಂಪೂರ್ಣ ಅಚ್ಚ ಕನ್ನಡಿಗರು ಅವರ ಬಗ್ಗೆ ಈ ಹಿಂದೆ ನಮ್ಮ ಸರ್ಕಾರದವರು ಮಾಡಿದ್ದೆಲ್ಲಾ ವಿಫಲವಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ನೆರವನ್ನು ಕೊಡಬೇಕು ಮತ್ತು ಈ ನಿಲುವಳಿ ಸೂಚನೆಯನ್ನು ಮಾನ್ಯ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ತಾಳವಾಡಿ ಫಿರ್ಕಾದ ಪ್ರಶ್ನೆ ಬಗ್ಗೆ ರಾಜಕೀಯ ಇದೆ ಎಂದು ನಾನು ಒಪ್ಪಿಕೊಂಡಿಲ್ಲ. ಅದು ಏನಿದ್ದರೂ ಕಾಂಗ್ರೆಸ್‌ನವರು ಮಾಡಬೇಕು ಉಳಿಕೆಯವರು ಮಾಡಬಾರದು ಅಥವಾ ಕಾಂಗ್ರೆಸ್‌ನವರು ಮಾಡಬಾರದು ಎರಡನೆಯವರೇ ಮಾಡಬೇಕು ಅಂತ ಅನ್ನುವಂತಹ ಪ್ರಶ್ನೆಯಲ್ಲ. ನಿನ್ನೆಯೋ ಬಹುಶಃ ಮೊನ್ನೆಯೋ ಸರಿಯಾದ ತಾರೀಖು ಗೊತ್ತಿಲ್ಲ ತಾಳವಾಡಿ ಫಿರ್ಕಾದ ಕೆಲವು ಜನ ಬಂದಿದ್ದರು ನನಗೆ ಒಂದು ಮೆಮೋರ್ಯಾಂಡಂ ಕೊಟ್ಟಿದ್ದಾರೆ, ತಾಳವಾಡಿ ಫಿರ್ಕಾದಲ್ಲಿ ಒಟ್ಟು 50 ಸಾವಿರ ಜನ ಆಗಬಹುದು, ಅವರು ಆ ಏರಿಯಾದಲ್ಲಿ ಇದ್ದಾರೆ, ಮತ್ತು ಅವರೆಲ್ಲಾ ಹೆಚ್ಚಾಗಿ ಕನ್ನಡಿಗರೇ ಇದ್ದಾರೆ ಅನ್ನುವಂತಹದು ಯಾವುದೇ ವಿವಾದ ಇಲ್ಲದಂತಹ ಒಂದು ವಿಚಾರ. ಅವರು ಮೈಸೂರಿನಲ್ಲಿ ಸೇರ್ಪಡೆಯಾಗಬೇಕು, ಕನ್ನಡನಾಡಿನಲ್ಲಿ ಬರಬೇಕೆಂಬ ಆತುರ ಅವರಲ್ಲಿ ನಾನು ಕಂಡಿದ್ದೇನೆ. ಆದರೆ ಈ ಪ್ರಶ್ನೆ ಇತ್ಯರ್ಥಮಾಡಬೇಕಾದರೆ ನಾವು ಸ್ವಲ್ಪ ಮಟ್ಟಿಗೆ ಆಲೋಚನೆ ಮಾಡಿ ಇದರ ಬಗ್ಗೆ ಇತ್ಯರ್ಥ ಮಾಡಬೇಕಾಗುತ್ತದೆ ಎಂದು ನಾನು ಅವರಿಗೆ ಹೇಳಿದೆ. ಅವರ ಜೊತೆಯಲ್ಲಿ ವಾಟಾಳ್ ನಾಗರಾಜ್‌ರವರೂ ಬಂದಿದ್ದರು ಮತ್ತು

(ಶ್ರೀ ವೀರೇಂದ್ರ ಪಾಟೀಲ್)

ಶ್ರೀಮಾನ್ ಪುಟ್ಟಸ್ವಾಮಿಯವರೂ ಕೂಡ ಬಂದಿದ್ದರು. ವಿಚಾರ ಮಾಡಿ ಯಾವ ರೀತಿ ಹೆಜ್ಜೆ ಇಡಬೇಕೆಂಬ ಪ್ರಶ್ನೆ ಇದೆ. ಇಷ್ಟರಲ್ಲೇ ತಮಿಳುನಾಡಿನ ಚೀಫ್ ಮಿನಿಸ್ಟರು ಮತ್ತು ನಾನು ಒಂದು ಕಡೆ ದೆಹಲಿಯಲ್ಲಿ ಕಾವೇರಿ ಅಗ್ರಿಮೆಂಟ್ ಬಗ್ಗೆ ಸೇರುವವರಿದ್ದೇವೆ. ಚೀಫ್ ಮಿನಿಸ್ಟರ ಮೀಟಿಂಗ್ ಕೇಂದ್ರದ ನೀರಾವರಿ ಮಂತ್ರಿಗಳು ಕರೆದಿದ್ದಾರೆ, ಆಗ ನಾನು ಅವರೊಡನೆ ಚರ್ಚೆ ಮಾಡುತ್ತೇನೆ. ಒಂದು ಅಮಿಕಬಲ್ ಸೆಟ್ಲಮೆಂಟ್ ಆಗುವಂತಹ ಒಂದು ಪ್ರಯತ್ನ ನಾವೆಲ್ಲರೂ ಮಾಡಬೇಕಾಗುತ್ತದೆ. ಈ ವಿಚಾರವನ್ನು ಅವತ್ತು ನಾನು ಅವರೆಲ್ಲರಿಗೂ ಹೇಳಿದ್ದೇ. ಅದೇ ವಿಚಾರ ಇವತ್ತು ಈ ಸಭೆಗೆ ಹೇಳಬೇಕಾಗಿದೆ ಅವತ ಆತುರತೆ ಎಷ್ಟಿದೆ ಎಂಬುದು ನನಗೆ ಗೊತ್ತಾಗುತ್ತದೆ ಮತ್ತು ಅಲ್ಲಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದು ಸರ್ಕಾರದವರಿಗೆ ಗೊತ್ತಿದೆ, ಸರ್ಕಾರದವರಿಗೆ ಈ ಬಗ್ಗೆ ಇಚ್ಛೆ ಇರುವಂತಹುದು ಎಂದರೆ ಅಮಿಕಬಲ್ ಸೆಟ್ಲಮೆಂಟ್ ಮಾಡಿಕೊಳ್ಳಬೇಕು, ನಾವು ಮತ್ತು ತಮಿಳು ನಾಡಿನ ಮುಖ್ಯ ಮಂತ್ರಿಗಳು ಚರ್ಚೆ ಮಾಡಿ ಇದಕ್ಕೆ ಏನಾದರೂ ಒಂದು ಹಾದಿಯಲ್ಲಿ ಹೋಗುವುದಕ್ಕೆ ಎಷ್ಟುಮಟ್ಟಿಗೆ ಸಾಧ್ಯವಿದೆ ಅಷ್ಟೂ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ಈ ಸಭೆಗೆ ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ಅಮಿಕಬಲ್ ಸೆಟ್ಲಮೆಂಟ್ ಎಂದರೆ ಯಾವುದಾದರೂ ಒಂದು ನಮ್ಮ ಭಾಗವನ್ನು ಕೊಡಬೇಕೆಂಬ ಯೋಚನೆ ಇದೆಯೇ ಅಂತ ?

ಶ್ರೀ ವೀರೇಂದ್ರ ಪಾಟೀಲ್.—ಅಮಿಕಬಲ್ ಸೆಟ್ಲಮೆಂಟ್ ಅಂದರೆ ಇಬ್ಬರಿಗೂ ಸಮಾರ್ಪಕವಾದ ಒಂದು ಸೆಲ್ಯೂಷನ್ ತೆಗೆಯುವುದಕ್ಕೆ ಪ್ರಯತ್ನ ಮಾಡೋಣ ಅಂತ ಅನ್ನುವುದಾಗಿದೆ.

ಶ್ರೀ ಮಹದೇವ ಜಿ. ಬಣಕಾರ್.—ಮಾಡಕಸಿರಾ, ತಾಳವಾಡಿ ಮತ್ತು ಹೊಸೂರು ಆಂಧ್ರ ಮತ್ತು ಮದ್ರಾಸ್ ಸ್ಟೇಟ್‌ನ ಜೊತೆಯಲ್ಲಿರುವುದಲ್ಲದೆ ಇತ್ತಕಡೆ ದಕ್ಷಿಣ ಸೊಲ್ಲಾಪುರದವರೆಗೂ ಕೂಡ ಇದೆ. ಅಲ್ಲೂ ಕೂಡ ಇದೇ ರೀತಿ ಹೋರಾಟ ಪ್ರಾರಂಭ ಮಾಡಬೇಕಾಗುತ್ತದೆ. ಸೊಲ್ಲಾಪುರದ ಸಿದ್ದರಾಮೇಶ್ವರ ಒಂದು ಬಿಟ್ಟು ಬಾಕಿಯೆಲ್ಲಾ ಮಹಾರಾಷ್ಟ್ರದಲ್ಲಿ ಇದೆ, ಅವರೆಲ್ಲರೂ ಅಚ್ಚ ಕನ್ನಡಿಗರು ಅಂತ ಅಲ್ಲಿಯ ಪರ್ಸೆಂಟೇಜ್ ಆಫ್ ಪಾಪ್ಯುಲೇಷನ್ ಕೋಟ್ ಮಾಡಿ ಅವರೂ ಕೂಡ ಹೋರಾಟ ನಡೆಸಬೇಕೆಂದು ಮಾಡಿದ್ದಾರೆ, ಮಹಾಜನ್ ವರದಿಯನ್ನು ಒಪ್ಪಿಸುವಾಗ ಸರ್ಕಾರ ಅಥವಾ ನೀವು ಈ ಒಂದು ತಪ್ಪನ್ನು ಮಾಡಿದ್ದೀರಿ ಎಂದು ಅನಿಸುತ್ತದೆ, ಕೇರಳ—ಮೈಸೂರು, ಮೈಸೂರು—ಮಹಾರಾಷ್ಟ್ರ ಈ ಎರಡರ ಗಡಿ ಹೊಂದಾಣಿಕೆ ಸಂಬಂಧದಲ್ಲಿ ಅಫಿಷಿಯಲ್ ರೆಸಲ್ಯೂಷನ್ ರಾಜ್ಯ ಮಟ್ಟದಲ್ಲಿ ತಾವು ಈ ಸಭೆಯಲ್ಲಿ ತಂದು ಏಕೆ ಒಂದು ತೀರ್ಮಾನ ತೆಗೆದು ಕೊಳ್ಳಬಾರದು ? ಅಥವಾ ನಾವು ನಾನ್ ಅಫಿಷಿಯಲ್ ರೆಸಲ್ಯೂಷನ್ ತಂದರೆ ಅದಕ್ಕೆ ತಮ್ಮ ಸಮ್ಮತಿ ಸೂಚಿಸುತ್ತೀರಾ ಎಂದು ಸರ್ಕಾರದವರಲ್ಲಿ ಪ್ರಾರ್ಥನಾ ರೂಪದಲ್ಲಿ ಅಥವಾ ನೂಡನೆಯ ರೂಪದಲ್ಲಿ ಕೇಳುತ್ತಾ ಇದ್ದೇನೆ.

ಶ್ರೀ ವಿ. ಎನ್. ಪಾಟೀಲ್.—ಬಿದರ್ ಜಿಲ್ಲೆಯ ದೇಗಲೂರು ತಾಲ್ಲೂಕು ಚಾಲುಕ್ಯರ ಮನೆತನದಿಂದ ಕನ್ನಡ ರಾಜ್ಯದಲ್ಲಿ ಇತ್ತು ಅಂತ ಹೇಳಿ ಶಿಲಾ ಶಾಸನದಲ್ಲಿ ಇದೆ. ಸಾಧಾರಣ 197 ಹಳ್ಳಿಗಳು ಅಲ್ಲಿ ಇವೆ. ಅದೇ ರೀತಿ ಜಹಿರಬಾದ್‌ನ 120 ಹಳ್ಳಿಗಳು ಅಲ್ಲಿ ಇವೆ. ಇವುಗಳೂ ಕೂಡ ಕನ್ನಡ ಪ್ರದೇಶದೊಳಕ್ಕೆ ಬರುವಂತೆ ಮಾಡಲು ಅಧಿಕಾರ ಪಡೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎನ್. ಪುಟ್ಟಸ್ವಾಮಿ.—ಅಧ್ಯಕ್ಷರೇ ತಾಳವಾಡಿ ಫಿರ್ಕಾವನ್ನು ಸೇರಿಸಬೇಕೆಂದು ಹತ್ತು ಹದಿಮೂರು ವರ್ಷಗಳಿಂದ ಅಲ್ಲಿನ ಜನತೆ ಮೈಸೂರು ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ ಮತ್ತು ತಮಿಳುನಾಡು ಸರ್ಕಾರಕ್ಕೂ ಮನವಿಯನ್ನು ಸಲ್ಲಿಸುತ್ತಾ ಬಂದಿದ್ದರೂ ಕೂಡ ಅದರ ಬಗ್ಗೆ ಇನ್ನೂ ಒಂದು ಪೂರ್ಣವಾದ ಫಲ ದೊರೆಯಲಿಲ್ಲ ಎಂದು ಅವರು ಈ ಒಂದು ಚಳುವಳಿಯನ್ನು ಈ ತಿಂಗಳ 28ನೇ ತಾರೀಖು ಮಾಡಬೇಕೆಂದು ತೀರ್ಮಾನವನ್ನು ಕೈಕೊಂಡಿದ್ದಾರೆ. ತಾಳವಾಡಿ ಫಿರ್ಕಾ ಜನತೆಯ ಚಳುವಳಿಯಲ್ಲಿ ನಮ್ಮ ಕನ್ನಡ ಚಳುವಳಿಗಾರರೂ ಕೂಡ ಸೇರಿಕೊಂಡು ಅವರಿಗೆ ಸಹಾಯ ಮತ್ತು ನೆರವನ್ನು ಕೊಡಬೇಕೆಂದು ತೀರ್ಮಾನವನ್ನು ಕೈಕೊಂಡಿರುವುದು ಪತ್ರಿಕೆಯಲ್ಲಿ ಬಂದಿದೆ. ವಾಟಾಳ್ ನಾಗರಾಜ್‌ರವರು ಹೇಳಿಕೆಯನ್ನು ಕೊಟ್ಟ ಮೇಲೆ ಮದ್ರಾಸ್ ಸರ್ಕಾರದವರು ಚಾಮರಾಜನಗರ ಮತ್ತು ಕೊಳ್ಳೆಗಾಲದ ಬಾರ್ಡರ್‌ನಲ್ಲಿ ಆರ್ಮ್ ರಿಸರ್ವ್ ಪೋಲೀಸ್‌ನವರನ್ನು ಹಾಕಿದ್ದಾರೆ. ಅಲ್ಲದೇ ಸಿ.ಐ.ಡಿ.ಗಳು, ಸಬ್‌ಇನ್‌ಸ್ಪೆಕ್ಟರುಗಳು, ಸರ್ಕಲ್ ಇನ್‌ಸ್ಪೆಕ್ಟರುಗಳು ಮತ್ತು ಡಿ. ವೈ. ಎಸ್. ಪಿ. ಗಳನ್ನು ಚಾಮರಾಜನಗರಕ್ಕೂ ಕೂಡ ಕಳುಹಿಸಿ ಅವರ ಮೇರೆ

ದಬ್ಬಾಳಿಕೆ ಮಾಡದಂತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಮೈಸೂರಿನ ಮುಖ್ಯ ಮಂತ್ರಿಗಳಿಗೂ ಮತ್ತು ಸಂಬಂಧಪಟ್ಟ ಪೋಲೀಸ್ ಇಲಾಖೆಯ ಮಂತ್ರಿಗಳಿಗೂ ಮನವಿ ಮಾಡಿದ್ದು ಅಲ್ಲಿನ ಪರಿಸ್ಥಿತಿಯ ಮಾಹಿತಿ ತಮಗೆ ಬಂದಿದೆಯೇ ? ನಮ್ಮ ಪೋಲೀಸ್‌ನವರಿಗೂ ಕೂಡ ಈ ಬಗ್ಗೆ ಎಚ್ಚರಿಕೆ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಸೂಚನೆ ಕೊಟ್ಟಿದ್ದಾರೆಯೇ ಎಂದು ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅವರ ಒಂದು ಸ್ಟೇಟ್‌ಮೆಂಟಿನಲ್ಲಿ ಹೇಳಬೇಕು. ಇದರ ಬಗ್ಗೆ ಹೇಳಿಕೆ ಕೊಡುತ್ತಾರೆ ಎಂದು ನಂಬಿದ್ದೇನೆ.

Sri H. M. CHANNABASAPPA.—I would like to know if at any time the Hon. Chief Minister raised the question of small minor border adjustments in the Zonal Council Meetings and if so, to what effect ?

ಶ್ರೀ ಸಿದ್ದಯ್ಯ ಕಾಶೀಮಠ.—ತಾಳವಾಡಿ ಫಿರ್ಕಾದಲ್ಲಿ ಇರುವ ಕನ್ನಡ ಜನರಿಗೆ ಕೊಡುತ್ತಿರುವ ಕಿರುಕುಳವನ್ನು ನಿಲ್ಲಿಸುವುದಕ್ಕೆ ನಮ್ಮ ಸರ್ಕಾರದವರು ಮದ್ರಾಸ್ ಸರ್ಕಾರದವರಿಗೆ ಸೂಚನೆ ಕೊಟ್ಟು ಆ ರೀತಿ ಮಾಡದಂತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri B. B. SAYANAK.—May I know whether the Mysore Government is going to accept village as unit geographical contiguity, simple majority and the wishes of the people for solving border disputes with the neighbouring States ?

ಶ್ರೀ ಅಲ್ಲಂ ಕರಿಬಸಪ್ಪ.—ಕಾಂಪ್ರೊಮಿಟ್ ಮದ್ರಾಸ್ ಸ್ಟೇಟಿನಲ್ಲಿದ್ದ ಬಳ್ಳಾರಿ ಜಿಲ್ಲೆಯ ಆಲೂರು ತಾಲ್ಲೂಕಿನ ಗೊಧಾಳಿ, ಆದೋನಿಯ ಹಲಗುಂದ ಮತ್ತು ರಾಯದುರ್ಗದ ಹನಾಲ್ ಫಿರ್ಕಾಗಳ ವಿಚಾರವನ್ನೂ ಕೂಡ ಆಲೋಚನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ತಾವೆಲ್ಲರು ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಕೇಳಿದ್ದಾರೆ. ಎಲ್ಲವನೂ ಹೇಳುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಗೊತ್ತಿಲ್ಲ. ಜೋನಲ್ ಕೌನ್ಸಿಲ್‌ನಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಾ ಎಂದು ಮಾನ್ಯ ಚನ್ನಬಸಪ್ಪನವರು ಕೇಳಿದ್ದಾರೆ. ನಾನು ಅಧಿಕಾರ ವಹಿಸಿಕೊಂಡ ಮೇಲೆ ಜೋನಲ್ ಕೌನ್ಸಿಲ್ ಮೀಟಿಂಗ್ ಈಚೆಗೆ ಬೆಂಗಳೂರಿನಲ್ಲಿ ನಡೆಯಿತು. ಆಗ ಈ ಪ್ರಶ್ನೆ ಬಂದಿರಲಿಲ್ಲ, ನಾನೂ ಎತ್ತಿರಲಿಲ್ಲ.

ಶೋಲಾಪುರ, ಅಕ್ಕಲಕೋಟೆ ಮೈಸೂರಿಗೆ ಬರುವುದರ ಬಗ್ಗೆ ಮತ್ತು ಬಳ್ಳಾರಿಗೆ ಸಂಬಂಧಪಟ್ಟ ಆಲೂರು, ಆದೋನಿ, ರಾಯದುರ್ಗಕ್ಕೆ ಸಂಬಂಧಪಟ್ಟ ಕೆಲವು ಹಳ್ಳಿಗಳನ್ನು ಮೈಸೂರಿಗೆ ಸೇರ್ಪಡೆ ಮಾಡುವುದರ ಬಗ್ಗೆ ಹೇಳಬೇಕಾಗಿದ್ದರೆ ದಕ್ಷಿಣ ಶೋಲಾಪುರ, ಅಕ್ಕಲಕೋಟೆ ಮತ್ತು ಬೆಳಗಾಂ ಪ್ರಶ್ನೆಯನ್ನು ಕಮಿಷನಿಗೆ ಒಪ್ಪಿಸಲಾಗಿದ್ದು ಅವರು ರಿಪೋರ್ಟನ್ನು ಕೊಟ್ಟಿದ್ದಾರೆ. ಆ ರಿಪೋರ್ಟನ್ನು ಒಪ್ಪಬೇಕು ಎನ್ನುವುದು ನಮ್ಮ ವಾದವಿದೆ. ಅವರ ಬಗ್ಗೆ ಪುನರ್‌ವಿಮರ್ಶೆ ಮಾಡಿ ಎಂದು ಮತ್ತೊಂದು ರೆಸಲ್ಯೂಷನ್ ಮಾಡಿ ಕಳುಹಿಸುವುದು ಸರ್ಕಾರದ ನೀತಿಯಲ್ಲ. ಇದರ ಬಗ್ಗೆ ಯಾರ ಜೊತೆಯಲ್ಲಿಯೂ ನೆಗೋಷಿಯೇಟ್ ಮಾಡುವುದಕ್ಕೆ ತಯಾರಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ನೆಗೋಷಿಯೇಷನ್ ಮುಂತಾದುವೆಲ್ಲ ಫೇಲ್ ಆದಮೇಲೆಯೇ ಕಮಿಷನ್ ನೇಮಕವಾದದ್ದು. ಕೇಂದ್ರ ಸರ್ಕಾರ ಒತ್ತಾಯ ಮಾಡಿ ಕಮಿಷನ್ ನಮ್ಮ ಮೇಲೆ ಹೊರಿಸಿದರು. ದಕ್ಷಿಣ ಶೋಲಾಪುರ ಅಕ್ಕಲಕೋಟೆ ವಿಚಾರದಲ್ಲಿ ಕಮಿಷನ್ ರಿಪೋರ್ಟ್ ಕೊಟ್ಟಿದೆ. ಅದಕ್ಕೆ ಕೇಂದ್ರ ಸರ್ಕಾರದಮೇಲೆ ಒತ್ತಾಯವನ್ನು ತರುತ್ತಿದ್ದೇವೆ. ಉಳಿಕೆ ಪ್ರದೇಶಗಳ ವಿಲೀನದ ಪ್ರಶ್ನೆಯನ್ನು ಅದರೊಂದಿಗೆ ಸೇರಿಸುವುದಕ್ಕೆ ಆಗುವುದಿಲ್ಲ. ಕರ್ಣಾಟಕದ ಹಿತದೃಷ್ಟಿಯಿಂದ ಆ ರೀತಿ ಮಾಡುವುದು ತಪ್ಪಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಂದ್ರ ಸರ್ಕಾರದವರ ಒತ್ತಾಯದಮೇಲೆ ಒಪ್ಪಿಕೊಳ್ಳಲಾಯಿತು ಎನ್ನುವುದು ಸರಿಯಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರ ಎಂದು ಹೇಳಬೇಕೋ ? ಕೇಂದ್ರದ ನಾಯಕರು ಎಂದು ಹೇಳಬೇಕೋ ? ಪ್ರಧಾನ ಮಂತ್ರಿಗಳು ಎಂದು ಹೇಳಬೇಕೋ ಎನ್ನುವುದು ಗೊತ್ತಿಲ್ಲ. ಮಾನ್ಯ ಚನ್ನಬಸಪ್ಪನವರು ಹೇರ್ ಸ್ಪ್ಲಿಟ್ ಮಾಡುತ್ತಿದ್ದಾರೆ. ಏನಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಕರ್ಣಾಟಕದ ಜನತೆಯಾಗಲೀ, ಕರ್ಣಾಟಕದ ಆಗಿನ ಮುಖ್ಯ ಮಂತ್ರಿಗಳಾಗಲೀ, ಕರ್ಣಾಟಕದ ಸರ್ಕಾರವೇ ಆಗಲೀ, ಬೆಳಗಾಂ ಪ್ರಶ್ನೆ ಕಮಿಷನ್ನಿಗೆ ಹೋಗಬೇಕು ಎನ್ನುವಂಥ ಮನಸ್ಸಿನಿಂದ ಇರಲಿಲ್ಲ, ಅವರಿಗೆ ಅಂಥ ಪಾಲಿಸಿ ಇರಲಿಲ್ಲ. ಒತ್ತಾಯದಿಂದ ಅದನು ನಮ್ಮ ಮೇಲೆ ಹೇರಲಾಯಿತು, ನಮ್ಮ ಸರ್ಕಾರದ ಮೇಲೆ ಹೇರಲಾಯಿತು.

ಶ್ರೀ ಕೆ. ಎಚ್. ರಂಗನಾಥ.—ಆಗಿನ ಕರ್ನಾಟಕದ ಮುಖ್ಯ ಮಂತ್ರಿಗಳು ಯೀರ್ಡ್ ಆದರು.

ಶ್ರೀ ವೀರೇಂದ್ರ ಪಾಟೀಲ್.—ಇತಿಹಾಸವಿದೆ, ಅದನ್ನು ಯಾರೂ ಅಳಿಸುವುದಕ್ಕಾಗುವುದಿಲ್ಲ. ನಾನು ಹೇಳಿದ ಉದ್ದೇಶವೇನೆಂದರೆ ಆ ಪ್ರಶ್ನೆಯನ್ನೂ ಮತ್ತು ನಮಗೆ ಬರಬೇಕಾದ ಉಳಿಕೆ ಭಾಗಗಳ ಪ್ರಶ್ನೆಯನ್ನೂ ಮಿಕ್ಸ್ ಆಫ್ ಮಾಡುವುದರಿಂದ ನಮ್ಮ ಹಿಕಕ್ಕೆ ಧಕ್ಕೆ ಬರುತ್ತದೆ ಎನ್ನುವ ಮಂಥ ಮಾತನ್ನು ಮಾನ್ಯ ಬಣಕಾರ ಅವರು ಎಲ್ಲ ವಿಚಾರಗಳಿಗೂ ಸಂಬಂಧಪಟ್ಟ ಹಾಗೆ ಇನ್ನೊಂದು ರೆಸಲ್ಯೂಷನ್ ಮಾಡೋಣವೆಂದು ಹೇಳಿದ್ದಕ್ಕೆ ತಿಳಿಸುತ್ತ ಇದ್ದೇನೆ.

ಮಾನ್ಯ ಸದಸ್ಯರಾದ ಸಯಿನ್ ಅವರು ಗ್ರಾಮವನ್ನು ಒಂದು ಘಟಕವಾಗಿ ಏಕೆ ತೆಗೆದು ಕೊಳ್ಳಬಾರದು ಎಂದು ಕೇಳಿದರು. ಆ ತರಹ ನಾವು ಒಪ್ಪಿಲ್ಲ. ಮಹಾಜನ್ ಕಮಿಷನ್ ಮುಂದೆ ನಮ್ಮ ನಿಲುವು ಏನಿತ್ತು, ಮುಂಚಿನಿಂದ ನಮ್ಮ ನಿಲುವು ಏನಿತ್ತು ಎನ್ನುವುದು ಎಲ್ಲರಿಗೂ ಗೊತ್ತು. ನಮಗೆ ಬರಬೇಕಾದ ಕೆಲವು ಜಾಗಗಳ ಬಗ್ಗೆ ಅಮಿಕಬಲ್ ಆಗಿ ತಿರ್ಮಾನ ಮಾಡಿಕೊಳ್ಳಬೇಕಾದ ವಿಚಾರವೆಂದು ನಾನು ಮೊದಲೇ ಹೇಳಿದ್ದೇನೆ. ಇದು ಬಹಳ ಜಟಿಲವಾದ ಪ್ರಶ್ನೆ, ಜಾಗರೂಕತೆಯಿಂದ ಹೆಜ್ಜೆ ಇಡಬೇಕಾಗುತ್ತದೆ. ಇದರಲ್ಲಿ ಯಾವ ನೀತಿ, ಧ್ಯೇಯ, ಧೋರಣೆ ತಾಳುತ್ತೇವೆ ಎನ್ನುವುದು ಬಹಳಷ್ಟಿಗೆ ಮಹಾಜನ್ ಕಮಿಷನ್ ರೆಕಮೆಂಡೇಷನ್ ಒಪ್ಪಿಗೆಯ ಬಗ್ಗೆಯೂ ಕೂಡ ಅದರಮೇಲೆ ಕೂಡ ಪರಿಣಾಮವಾಗುವ ಸಂಭವವಿರುವುದರಿಂದ ಬಹಳ ಜಾಗರೂಕತೆಯಿಂದ ಹೆಜ್ಜೆ ಇಡಬೇಕಾಗಿದೆ. ಪರಿಶೀಲನೆಯಿಂದ ಏನಾದರೂ ಸಾಧ್ಯವಾಗುವುದು ಇದ್ದರೆ ತಮಿಳುನಾಡು ಮುಖ್ಯ ಮಂತ್ರಿಯವರ ಜೊತೆಯಲ್ಲಿ ಮಾತನಾಡಿ ಮಾಡುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ನೂಜನೆಯನ್ನು ಒತ್ತಾಯಮಾಡುತ್ತಾರೆಯೇ ?

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಯವರು ಮದ್ರಾಸ ಮುಖ್ಯ ಮಂತ್ರಿಯವರ ಜೊತೆಯಲ್ಲಿ ಮಾತನಾಡಿ ತಾಳಿದಾಡಿ ಭಾಗವನ್ನು ಕರ್ನಾಟಕಕ್ಕೆ ಪಡೆಯುತಕ್ಕ ಭರವಸೆಯನ್ನು ಕೊಟ್ಟುದರಿಂದ ನನ್ನ ನಿಲುವಳಿ ನೂಜನೆಯನ್ನು ನಾನು ಒತ್ತಾಯ ಮಾಡುವುದಿಲ್ಲ.

ಶ್ರೀ ಪಿ. ಎನ್. ಪಾಟೀಲ್.—ದೇಗಲೂರು ತಾಲ್ಲೂಕು, ನಾರಾಯಣ ಖೇಡ ತಾಲ್ಲೂಕು ಗಳಲ್ಲಿ ಸುಮಾರು 190 ಹಳ್ಳಿಗಳಿವೆ. ಅಲ್ಲಿ ಹೆಚ್ಚಾಗಿ ಕನ್ನಡವನ್ನು ಮಾತನಾಡುತ್ತಾರೆ. ಅಲ್ಲಿರುವ ಹರಿಜನರು, ಗಿರಿಜನರು, ದೀನದಲಿತರು ಮಾತನಾಡುವ ಭಾಷೆ ಕನ್ನಡ. ಆಂಥ ಭಾಗಗಳು ಕೈಬಿಟ್ಟು ಹೋಗಿವೆ. ಇದರ ಬಗ್ಗೆಯೂ ಸ್ಪಷ್ಟೀಕರಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ತಿಳಿಸಿರುವ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಮೈನಾರ್ ಅಡ್ಜಸ್ಟ್‌ಮೆಂಟಿಗೆ ನಾವು ತಯಾರಿದ್ದೇವೆ ಎನ್ನುವಂಥ ಮಾತನ್ನು ಹೇಳಿದ್ದೇನೆ ಅದರ ಬಗ್ಗೆ ಸಂಬಂಧಪಟ್ಟ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಅಮಿಕಬಲ್ ಸೆಟ್ಲಮೆಂಟ್ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೆ ಒಂದು ವಾದವನ್ನು ತಯಾರು ಮಾಡಿ, ವಿವಾದವನ್ನು ಎಬ್ಬಿಸಿ ಲಾಭ ಪಡೆಯುತ್ತೇವೆ ಎನ್ನುವಂಥ ಹಟದ ಮಾತು ಇಷ್ಟೊಂದು ಸಮಂಜಸವಲ್ಲ ಎಂದು ನನಗನ್ನಿಸುತ್ತದೆ.

ಶ್ರೀ ಎಸ್. ಪುಟ್ಟಸ್ವಾಮಿ.—ಮದ್ರಾಸ್ ಸರ್ಕಾರದವರು ಪೋಲೀಸಿನವರಿಂದ ಗುಂಟು ಮಾಡಿರತಕ್ಕ ಗೊಂದಲದ ಬಗ್ಗೆ ನನಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮೊನ್ನೆ ಮಾನ್ಯ ಸದಸ್ಯರು ಬಂದು ಮಾತನಾಡಿದಾಗ ಈ ವಿಚಾರವನ್ನು ಯಾವುದನ್ನೂ ಹೇಳಲಿಲ್ಲ. ಈ ವಿಷಯದ ಬಗ್ಗೆ ತಿಳಿದುಕೊಂಡು ಹೇಳಬೇಕಾಗುತ್ತದೆ ಈ ಹೊತ್ತು ನನಗೆ ಏನೂ ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಅವರಿಗೆ ತಿಳಿದುಕೊಳ್ಳಬೇಕಾಗಿದ್ದರೆ ತಿಳಿದುಕೊಂಡು ಹೇಳುತ್ತೇನೆ.

Question of privilege against the Chief Minister.

ಶ್ರೀ ಎಚ್. ಎನ್. ನಂಜೇಗೌಡ. (ಅರಕಲ್ ಗೂಡು).—ಸ್ವಾಮಿ, ಅಧ್ಯಕ್ಷರೇ, 1969 ನೇ ಇಸವಿ ಸೆಪ್ಟೆಂಬರ್ 9ನೇ ತಾರೀಖು ಮಂಗಳವಾರದ ದಿನ ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು, "ಮೈಸೂರ್ ಅಪ್ಪರ್ ಇಂಡೆಗ್ರೇಷನ್ ಸರ್ವೆ ಆಫ್ ಡೆವಲಪ್‌ಮೆಂಟ್ ಆಫ್ ಡಿಫರೆಂಟ್ ರೀಜನ್ಸ್" ಎನ್ನತಕ್ಕ ಒಂದು ಸ್ಟೇಟ್‌ಮೆಂಟನ್ನು ಮಂಡಿಸಿದರು. ಅದರಿಂದ ನಮ್ಮ ಹಕ್ಕಿಗೆ ಚ್ಯುತಿ ತಂದಿದ್ದಾರೆ. ಮಾನ್ಯ ಸದಸ್ಯರನ್ನು ತಪ್ಪು ದಾರಿಗೆ ಉದ್ದೇಶಪೂರ್ವಕವಾಗಿ ಎಳೆಯುತಕ್ಕ ಅಭಿಪ್ರಾಯದಿಂದ ಸದಸ್ಯರ ಮನಸ್ಸನ್ನು ಬೇರೆಡೆಗೆ ತಿರುಗಿಸುವಂಥದ್ದು ಹಾಗೂ ಪ್ರಾಮುಖ್ಯವಾದ ಸಮಸ್ಯೆಯಿಂದ ವಿಮುಖರನ್ನಾಗಿ ಮಾಡುವುದು ಇವೆಲ್ಲದರ ಜೊತೆಗೆ ಅಂಕಿ ಅಂಶಗಳನ್ನು ತಪ್ಪಾಗಿ